# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 51 (47)

ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವಿದರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 13.02.2023

ಉತ್ತರಿಸಬೇಕಾದ ಸಚಿವರು : ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

| ಕ್ರಮ ಸಂಖ್ಯೆ: | ಪ್ರಶ್ನೆ | ಉತ್ತರ |
|---|---|---|
| ಅ) | ಕಿತ್ತೂರು ಕರ್ನಾಟಕ ಸೇರಿದಂತೆ ಹಲವು ಹಿಂದುಳಿದ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸನ್ 2018 ರಿಂದ ಇಲ್ಲಿಯವರೆಗೆ ಮಂಜೂರಾತಿ ಶುಲ್ಕವನ್ನು ಎಷ್ಟು ಬಾರಿ ಪರಿಷ್ಕರಣೆ ಮಾಡಲಾಗಿದೆ ಹಾಗೂ ಯಾವ ಮಾನದಂಡಗಳ ಮೇಲೆ ಪರಿಷ್ಕರಣೆ ಮಾಡಲಾಗಿದೆ: | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯತಡೆ ಮತ್ತು ನಿಯಂತ್ರಣ) ಕಾಯ್ದೆ, 1974 ರಡಿಯಲ್ಲಿ ಸ್ಥಾಪನೆಗೊಂಡಿದ್ದು, Karnataka State Pollution Control Board (Procedure for Transaction of Business) and the Water (Prevention and Control of Pollution) Rules, 1976 ರಡಿಯಲ್ಲಿ ಮೊಟ್ಟ ಮೊದಲ ಬಾರಿಗೆ ಸಮ್ಮತಿ ಅರ್ಜಿಗಳಿಗೆ ಸಮ್ಮತಿ ಶುಲ್ಕವನ್ನು 1983 ರಲ್ಲಿ ಅಧಿಸೂಚಿಸಲಾಗಿದ್ದು, ನಂತರ 1991, 1996 & 1998 ರಲ್ಲಿ ಸಮ್ಮತಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ. ಸದರಿ ನಿಯಮಗಳಿಗೆ 1993ರಲ್ಲಿ ತಿದ್ದುಪಡಿಯನ್ನು ತರಲಾಗಿದ್ದು, ಈ ತಿದ್ದುಪಡಿಯನ್ವಯ "ಬಂಡವಾಳ ಹೂಡಿಕೆ (Capital Investment)"ನ್ನು ಈ ಕೆಳಕಂಡಂತೆ ವಿವರಿಸಲಾಗಿದೆ. ಈ ಮಾನದಂಡಗಳನ್ನು ಆಧರಿಸಿ ಸಮ್ಮತಿ ಶುಲ್ಕವನ್ನು ಪರಿಷ್ಕರಣೆ ಮಾಡಲಾಗಿದೆ.<br><br>1. ಅಸ್ತಿತ್ವದಲ್ಲಿರುವ ಕೈಗಾರಿಕೆಗಳಿಗೆ ಬಂಡವಾಳ ಹೂಡಿಕೆ: ಅಸ್ತಿತ್ವದಲ್ಲಿರುವ ಯಾವುದೇ ಉದ್ಯಮದ ಬಂಡವಾಳ ಹೂಡಿಕೆಯು 1983 ರ ಲೆಕ್ಕ ಪರಿಶೋಧಕ ವರದಿಯ ನಿಗದಿತ ವೇಳಾ ಪಟ್ಟಿಯಲ್ಲಿ ತೋರಿಸಿರುವಂತೆ ಉದ್ಯಮದ ಒಟ್ಟು ಸ್ಥಿರ ಆಸ್ತಿಗಳಾಗಿದ್ದು, ಭೂಮಿ, ಕಟ್ಟಡ (ಸಿಬ್ಬಂದಿ ಕ್ವಾರ್ಟರ್ಸ್ ಸೇರಿದಂತೆ), ಸ್ಥಾವರ ಮತ್ತು ಯಂತ್ರೋಪಕರಣಗಳು, ಸದ್ಭಾವನೆ ಮತ್ತು ಇತರಚರ ಮತ್ತು ಸ್ಥಿರ ಆಸ್ತಿಗಳು, ನಂತರದ ವರ್ಷಗಳಲ್ಲಿ ಒಟ್ಟಾರೆ ಬಂಡವಾಳ ಹೂಡಿಕೆಯ ಮೇಲೆ ಮಾಡಿದ ಸೇರ್ಪಡೆಗಳು, 1983 ರ ನಂತರ ಮಾಡಿದ ಯಾವುದೇ ಹೆಚ್ಚುವರಿ ಬಂಡವಾಳ ಹೂಡಿಕೆಯನ್ನು ನಂತರದ ಲೆಕ್ಕಪರಿಶೋಧನಾ ವರದಿಗಳ ಸ್ಥಿರ ಆಸ್ತಿ ಪಟ್ಟಿಯಲ್ಲಿ ಪ್ರತಿ ಬಿಂಬಿಸಲಾದ ಬಂಡವಾಳ ಹೂಡಿಕೆಯನ್ನು ಸಹ ಪರಿಗಣಿಸಲಾಗುತ್ತದೆ.<br><br>2. ಹೊಸ ಉದ್ದಿಮೆಯನ್ನು ಸ್ಥಾಪಿಸಲು ಒದಗಿಸಲಾಗುವ ಒಟ್ಟಾರೆ ಬಂಡವಾಳ ಹೂಡಿಕೆ ಅಥವಾ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಯೋಜನಾ ವರದಿಯಲ್ಲಿ ವಿವರಿಸಿದಂತೆ ಭೂಮಿ, ಕಟ್ಟಡಗಳು, ಸಿಬ್ಬಂದಿ ಕ್ವಾರ್ಟರ್ಸ್, ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳನ್ನು ಒಳಗೊಂಡಂತೆ ಯಂತ್ರೋಪಕರಣಗಳ ಮೇಲಿನ ಬಂಡವಾಳ ಹೂಡಿಕೆ. |

| | | |
|---|---|---|
| | | 3. ಭೂಮಿ ಮತ್ತು/ಅಥವಾ ಕಟ್ಟಡ ಅಥವಾ ಯಾವುದೇ ಇತರ ಆಸ್ತಿಗಳನ್ನು ಗುತ್ತಿಗೆಗೆ ತೆಗೆದುಕೊಂಡಾಗ ಬಂಡವಾಳ ಹೂಡಿಕೆಯನ್ನು ವಾರ್ಷಿಕ ಗುತ್ತಿಗೆ ಮೌಲ್ಯದ ಹತ್ತು ಪಟ್ಟು ಬಂಡವಾಳ ಹೂಡಿಕೆಯನ್ನು ಒಟ್ಟಾರೆ ಹೂಡಿಕೆಯ ಸಮಾನವಾಗಿ ತೆಗೆದುಕೊಳ್ಳಬೇಕು.<br><br>ಕೈಗಾರಿಕೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವಾಗ ಜಲ ಮತ್ತು ವಾಯು ಕಾಯ್ದೆಗಳಡಿಯಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಹಾಗೂ ಅರ್ಜಿ ಸಲ್ಲಿಸುವಾಗ ಒಟ್ಟಾರೆ ಬಂಡವಾಳದ ಮೇಲೆ ಸಮ್ಮತಿ ಶುಲ್ಕವನ್ನು ಸಲ್ಲಿಸಬೇಕಾಗುತ್ತದೆ.<br><br>ಮುಂದುವರೆದು, ಮಂಡಳಿಯ ಕಾರ್ಯ ಚಟುವಟಿಕೆಗಳು ವಿಸ್ತಾರಗೊಂಡಿದ್ದರಿಂದ ಮತ್ತು ಮಾಲಿನ್ಯ ನಿಯಂತ್ರಣಾ ಮಾಪನಾ ಕಾರ್ಯಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸುವ ಅಗತ್ಯವಿರುವುದರಿಂದ 2013ರಲ್ಲಿ ಸಮ್ಮತಿ ಶುಲ್ಕ ಪರಿಷ್ಕರಿಸುವ ಬಗ್ಗೆ ಅಧ್ಯಯನ ನಡೆಸಲಾಯಿತು. ಹಾಗೂ ಮಂಡಳಿಯು ಸಮ್ಮತಿ ಶುಲ್ಕ ಪರಿಷ್ಕರಿಸಲು ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಲಾಯಿತು. ಮಂಡಳಿಯ ಶಿಫಾರಸ್ಸಿನಂತೆ 22 ವರ್ಷಗಳ ನಂತರ ಸರ್ಕಾರವು ಸಮ್ಮತಿ ಶುಲ್ಕವನ್ನು ಪರಿಷ್ಕರಿಸಿ ಹೊಸ ಅಧಿಸೂಚನೆಯನ್ನು ದಿನಾಂಕ: 12.11.2020 ರಂದು ಹೊರಡಿಸಿರುತ್ತದೆ.<br><br>ಈ ಅಧಿಸೂಚನೆಗೆ ಕೈಗಾರಿಕೆಗಳು ಮತ್ತು ಕೈಗಾರಿಕ ಸಂಘಗಳು ತೀವ್ರ ಪ್ರತಿರೋಧ ವ್ಯಕ್ತ ಪಡಿಸಿ ಮನವಿ ಸಲ್ಲಿಸಿದ ಕಾರಣ ಸದರಿ ಅಧಿಸೂಚನೆಗೆ ಭಾಗಶ: ಮಾರ್ಪಾಡು ಮಾಡಿ ಸರ್ಕಾರದಿಂದ ದಿನಾಂಕ: 26.10.2021 ರಂದು ಪರಿಷ್ಕೃತ ಆದೇಶ ಹೊರಡಿಸಲಾಗಿರುತ್ತದೆ. |
| ಆ) | ಪ್ರಸ್ತುತ ಇರುವ ಮಂಜೂರಾತಿ ಶುಲ್ಕ ಅಥವಾ ಪರಿಸರ ಶುಲ್ಕ ದುಬಾರಿಯಾಗಿರುವುದು ನಿಜವೇ; ಹಾಗಿದ್ದಲ್ಲಿ ಇದನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ, 1974 ಹಾಗು ವಾಯು (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ, 1981 ರಡಿಯಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ ಉದ್ದಿಮೆಗಳು/ ಸಂಸ್ಥೆಗಳು ವಿಸರ್ಜಿಸುವ ತ್ಯಾಜ್ಯ ನೀರು ಹಾಗು ಉದ್ದಿಮೆಯ ಚಿಮಣಿಗಳ ಮೂಲಕ ಹೊರಸೂಸುವ ಮಲಿನಕಾರಕಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಷರತ್ತು ಮತ್ತು ಗುಣ ಮಾನಕಗಳನ್ನು ನಿಗದಿ ಪಡಿಸಿ ಸಮ್ಮತಿ ಪತ್ರವನ್ನು (Consent for operation) ನೀಡಬೇಕಾಗಿರುತ್ತದೆ. ಈ ಸಂಬಂಧ ಉದ್ದಿಮೆಗಳು/ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಸಮ್ಮತಿ ಅರ್ಜಿಯನ್ನು ನಿಗದಿತ ಸಮ್ಮತಿ ಶುಲ್ಕದೊಂದಿಗೆ ಮಂಡಳಿಗೆ ಸಲ್ಲಿಸಿದ ನಂತರ ಉದ್ದಿಮೆಗಳ ಪರಿವೀಕ್ಷಣೆ ಮತ್ತು ಅರ್ಜಿ ವಿಲೇವಾರಿಗಾಗಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ.<br><br>ಮಂಡಳಿಯ ಕಾರ್ಯಚಟುವಟಿಕೆಗಳು ವಿಸ್ತಾರಗೊಂಡಿದ್ದರಿಂದ ಮತ್ತು ಮಾಲಿನ್ಯ ನಿಯಂತ್ರಣಾ ಮಾಪನಾ ಕಾರ್ಯಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸುವ ಅಗತ್ಯವಿರುವುದರಿಂದ 2013ರಲ್ಲಿ ಸಮ್ಮತಿ ಶುಲ್ಕ ಪರಿಷ್ಕರಿಸುವ ಬಗ್ಗೆ ಅಧ್ಯಯನ ನಡೆಸಲಾಯಿತು. ಹಾಗೂ ಮಂಡಳಿಯು ಸಮ್ಮತಿ ಶುಲ್ಕ ಪರಿಷ್ಕರಿಸಲು ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಲಾಯಿತು. ಮಂಡಳಿಯ ಶಿಫಾರಸ್ಸಿನಂತೆ 22 ವರ್ಷಗಳ ನಂತರ ಸರ್ಕಾರವು ಸಮ್ಮತಿ ಶುಲ್ಕವನ್ನು |

| | | |
|---|---|---|
| | | ಪರಿಷ್ಕರಿಸಿ ಹೊಸ ಅಧಿಸೂಚನೆಯನ್ನು ದಿನಾಂಕ:12.11.2020 ರಂದು ಹೊರಡಿಸಿರುತ್ತದೆ.<br><br>ಈ ಅಧಿಸೂಚನೆಗೆ ಕೈಗಾರಿಕೆಗಳು ಮತ್ತು ಕೈಗಾರಿಕ ಸಂಘಗಳು ತೀವ್ರ ಪ್ರತಿರೋಧ ವ್ಯಕ್ತ ಪಡಿಸಿ ಮನವಿ ಸಲ್ಲಿಸಿದ ಕಾರಣ ಸದರಿ ಅಧಿಸೂಚನೆಗೆ ಭಾಗಶ: ಮಾರ್ಪಾಡು ಮಾಡಿ ಸರ್ಕಾರದಿಂದ ದಿನಾಂಕ: 26.10.2021 ರಂದು ಪರಿಷ್ಕೃತ ಆದೇಶ ಹೊರಡಿಸಲಾಗಿರುತ್ತದೆ. |
| | | ಉದ್ದಿಮೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದಿನಾಂಕ: 01.02.2022 ರಂದು ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕೈಗಾರಿಕಾ ಸಂಘದ ಪ್ರತಿನಿಧಿಗಳ ಸಮ್ಮುಖದಲ್ಲಿ ಸಭೆ ನಡೆಸಿಸಮ್ಮತಿ ಶುಲ್ಕ ಪರಿಷ್ಕರಣೆಗೆ ಬಂದ ಮನವಿಗಳನ್ನು ಪರಾಮರ್ಶಿಸಿರುತ್ತಾರೆ ಹಾಗೂ ಮಂಡಳಿಯ ಅಧಿಕಾರಿಗಳಿಗೆ ಉದ್ದಿಮೆಗಳ ಮನವಿಗಳನ್ನು ಪರಿಶೀಲಿಸಲು ಸೂಚಿಸಿದ್ದರು.<br><br>ತದನಂತರ, ವಿಷಯವನ್ನು 234ನೇ ಮಂಡಳಿ ಸಭೆಯಲ್ಲಿ ಚರ್ಚಿಸಿ, ಸಭೆಯ ನಿರ್ಣಯದಂತೆ ದಿನಾಂಕ: 05.02.2022 ರಂದು ಮಂಡಳಿಯಿಂದ ಸುತ್ತೋಲೆಯನ್ನು ಹೊರಡಿಸಿದೆ. ಅದರಲ್ಲಿ ಮಂಡಳಿಯು ಕಾನೂನು ವಿಭಾಗದ ಸಲಹೆಯನ್ನು ಪಡೆದ ನಂತರ, ಚಾಲನೆಯಲ್ಲಿರುವ ಕಾರ್ಖಾನೆಗಳಿಂದ (ಕೆಂಪು, ಹಳದಿ, ಹಸಿರು ಪ್ರವರ್ಗ) ಆರ್ಥಿಕ ಬಿಕ್ಕಟ್ಟಿನ ಸಲುವಾಗಿ ಪೂರ್ತಿ ಸಮ್ಮತಿ ಶುಲ್ಕವನ್ನು (05, 10, 15 ವರ್ಷಗಳಿಗೆ) ಪಾವತಿಸಲು ಆಗದೇ ಕಡಿಮೆ ಅವಧಿಗೆ ಪಾವತಿಸಲು ನಿರ್ದಿಷ್ಟವಾದ ಮನವಿಗಳು ಬಂದಾಗ ಅಂತಹ ಕಾರ್ಖಾನೆಗಳ ಮನವಿಯನ್ನು ಪರಿಶೀಲಿಸಿದ ನಂತರ case to case basis ಆಧಾರದ ಮೇಲೆ, ಉದ್ದಿಮೆಗಳು ಕೇಳಿರುವ ನಿರ್ದಿಷ್ಟ ಅವಧಿಯ ಶುಲ್ಕವನ್ನು ಹಾಗೂ ನಿರ್ದಿಷ್ಟ ಅವಧಿಗೆ ಚಾಲನ ಪತ್ರವನ್ನು (Consent for Operation) ನೀಡಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.<br><br>ಈ ಪ್ರಕಾರವಾಗಿ ಮಂಡಳಿಯು ಕಡಿಮೆ ಅವಧಿಗೆ ಸಮ್ಮತಿ ಶುಲ್ಕ ಪಾವತಿಸಲು ಕೋರುವ ಕಾರ್ಖಾನೆಗಳ ಮನವಿಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಿದೆ. |
| ಇ) | ಬೆಳಗಾವಿ ಸೇರಿದಂತೆ ಮುಂಬೈ ಕರ್ನಾಟಕ ವಾಣಿಜ್ಯ ಸಂಘಟನೆಗಳು ಹಾಗೂ ಬೆಳಗಾವಿ ಕೈಗಾರಿಕೋದ್ಯಮಿಗಳ ನಿಯೋಗ ಪರಿಸರ ಮಂಜೂರಾತಿ ಶುಲ್ಕವನ್ನು ರದ್ದುಪಡಿಸಲು ಸರ್ಕಾರಕ್ಕೆ ಮನವಿ ಮಾಡಿದ್ದರೂ ಸಹ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು?<br>(ವಿವರ ನೀಡುವುದು) | ಸಮ್ಮತಿ ಶುಲ್ಕ ಹೆಚ್ಚುವರಿ ಆಗಿರುವುದನ್ನು ರದ್ದು ಪಡಿಸುವಂತೆ FKCCI, KASSIA, Laghu Udyog Bharati, Peenya Industries Association, Stone Crushing and quarry Association ಹಾಗೂ Plastic Manufacturer Association ಇವರಿಂದ ಮಂಡಳಿಗೆ ಮನವಿಗಳು ಸ್ವೀಕೃತವಾಗಿದ್ದವು. ಈ ಸಂಬಂಧ ದಿನಾಂಕ:01.02.2022 ರಂದು ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಸಭೆಯ ತೀರ್ಮಾನದಂತೆ ಮಂಡಳಿಯಿಂದ ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ. |

ಸಂಖ್ಯೆ: ಅಪಜೀ 36 ಇಪಿಸಿ 2023

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ ಜೀವಿಪರಿಸ್ಥಿತಿ
ಮತ್ತು ಪರಿಸರ ಸಚಿವರು.